ಹೆಂಡ್ತಿ, ಅವಳ ಮಗು ನೆನಪಾಗುತ್ತಲೇ ಇದ್ದರು. ಹೆಣ್ಮಕ್ಕಳ ಬದುಕು ಇಷ್ಟೇ ಅನ್ನಿಸಿತು. ತನ್ನ ಪಾಡಿಗೆ ತಾನು ಇರೋದು ಬಿಟ್ಟು, ಐಎಎಸ್ ಆದವನು ಸಿಕ್ಕ ಅಂತ ಬಿಸಿಲುಕುದುರೆಯ ಬೆನ್ನು ಹತ್ತಿದಳು. ಅವಳೇನೋ ಸತ್ತಳು. ಆದರೆ, ಅವಳ ಮಗು ಏನು ಪಾಪ ಮಾಡಿತ್ತು? ಅನ್ನಿಸಿದಾಗ ಶರತ್ ಮೇಲೆ ಸಿಟ್ಟು ಬರುತ್ತಿತ್ತು. ಅವನ ಹೆಣ್ಣುಬಾಕತನಕ್ಕೆ ಎಷ್ಟು ಜೀವಗಳು ಬಲಿಯಾಗಿವೆಯೋ? ಒಂದು ದುರ್ಬಲ ಕ್ಷಣದಲ್ಲಿ ನಾನೂ ಅವನ ಮಾತಿಗೆ ಮರುಳಾದೆನಲ್ಲ ಅನ್ನಿಸಿದ್ದೇ ತಡ ಮೊದಲು ಈ ಕೆಲಸ ಬಿಡಬೇಕು ಅನ್ನಿಸಿತು. ಹೆಣ್ಮಕ್ಕಳಿಗೆ ಸ್ಕೂಲು, ಕಾಲೇಜು, ಬ್ಯಾಂಕುಗಳ ಕೆಲಸವೇ ಸರಿ ಅಂತ ಅಪ್ಪ ಹೇಳುತ್ತಿದ್ದುದು ನೆನಪಾಗಿ ಐದಾರು ಕಾಲೇಜುಗಳಿಗೆ ಅರ್ಜಿ ಕಳಿಸಿದಳು.

***

ಅವತ್ತು ಆಫೀಸಿಗೆ ತಡವಾಗಿ ಹೋದಳು. 'ಶರತ್ ಸರ್, ಮೂರು ಸಲ ಇಂಟರ್‌ಕಾಂ ಮಾಡಿದ್ದರು. ನೀವು ತಕ್ಷಣ ಅವರ ಚೇಂಬರಿಗೆ ಹೋಗಬೇಕಂತೆ' ಅಂತ ಅಟೆಂಡರ್ ಹೇಳಿದ. ಸ್ವಲ್ಪ ಹೊತ್ತು ಸುಮ್ಮನೆ ಕೂತಿದ್ದ ಅವಳು ವೈಸ್‌ಪ್ರೆಸಿಡೆಂಟ್‌ರನ್ನು ಕಾಣಲು ಹೋದಳು. ಕೈಯಲ್ಲಿದ್ದ ಕವರನ್ನು ಅವರಿಗೆ ಕೊಡುತ್ತ, 'ಸರ್, ಇದು ನನ್ನ ರೆಸಿಗ್ನೇಷನ್ ಲೆಟರ್' ಅಂದಳು. ವಿಪಿ ಅವರ ಹುಬ್ಬುಗಳು ಗಂಟಿಕ್ಕಿದವು.

'ವಾಟ್ ಹ್ಯಾಪಂಡ್? ನಿಮ್ಮನ್ನು ಮ್ಯಾನೇಜ್‌ಮೆಂಟ್ ಚೆನ್ನಾಗಿ ನಡೆಸಿಕೊಂಡಿದೆಯಲ್ಲ, ಎನಿ ಪ್ರಾಬ್ಲಂ' ಅನ್ನುತ್ತ ಅವಳ ಮುಖ ನೋಡಿದರು.

ಕವರನ್ನು ಒಡೆದು ನೋಡದೆ ಅವಳ ಕಡೆಗೆ ತಳ್ಳುತ್ತ, 'ಕೆಲ್ಸ ಬಿಡೋ ಅಂಥದ್ದು ಏನಾಗಿದೆ? ಸಂಬಳ ಕಡಿಮೆಯಾದರೆ ಹೇಳಿ. ನಿಮ್ಮ ರೆಸಿಗ್ನೇಷನ್ ಒಪ್ಪಿಕೊಳ್ಳಲ್ಲ. ಮೂರು ದಿನ ಟೈಂ ಕೊಡ್ತೀನಿ, ರೀಕನ್ಸಿಡರ್ ಮಾಡಿ' ಅಂದರು. ಹತ್ತು ಸೆಕೆಂಡು ಸುಮ್ಮನಿದ್ದ ಅಶ್ವಿನಿ, 'ಸರ್ ಲೆಟರ್‌ನ ನಿಮಗೆ ಮೇಲ್ ಮಾಡಿದ್ದೀನಿ' ಅನ್ನುತ್ತ ಎದ್ದು ನಿಂತಳು. ಎರಡೂ ಕೈಜೋಡಿಸಿ ನಮಸ್ಕಾರ ಹೇಳಿ ಸಾರಿ ಅನ್ನುತ್ತ ಅವರ ಚೇಂಬರ್‌ನಿಂದ ಹೊರಕ್ಕೆ ಬಂದಳು.

ಅವಳ ಮನಸ್ಸಿನಲ್ಲಿ ಗೊಂದಲ ಶುರುವಾಯಿತು. ಶರತ್‌ಗೆ ಏನು ಹೇಳುವುದು? ಅವನೊಂದಿಗೆ ಆಡುವ ಮಾತುಗಳ ಬಗ್ಗೆ ಯೋಚಿಸಿದಳು. ಅವನು ನಂಬುವಂತಹ ಕಾರಣ ಹೇಳಬೇಕು. ಆದರೆ, ಏನು ಹೇಳುವುದು? ನಿಮ್ಮ ಜತೆ ಕೆಲಸ ಮಾಡೋಕೆ ಇಷ್ಟವಿಲ್ಲ ಅಂದರೆ ಸರಿಹೋದೀತೇ? ಬೇಡ ಅನ್ನಿಸಿತು.

ನಂಗೆ ಆಚಾರ್ಯ ಕಾಲೇಜಲ್ಲಿ ರೀಡರ್ ಕೆಲ್ಸ ಸಿಕ್ಕಿದೆ ಅಂತ ಹೇಳಲೇ ಅಥವಾ ಮದುವೆ ಗೊತ್ತಾಗಿದೆ ಅಂತ ಅನ್ನಲೇ, ಏನೇ ಕಾರಣ ಹೇಳಿದರೂ ಅವನ ಮುಖ ನೋಡದೆ ಹೇಳಬೇಕು. 'ವಿಪಿಯವರಿಗೆ ರೆಸಿಗ್ನೇಷನ್ ಲೆಟರ್ ಕೊಟ್ಟು ಬಂದೆ. ಅದರ ಕಾಪಿ ನಿಮಗೆ ಮೇಲ್ ಮಾಡಿದ್ದೀನಿ... ಈ ಕಂಪನಿಯಲ್ಲಿ ಕೆಲಸ ಮಾಡಿದ್ದು ವಂಡರ್‌ಫುಲ್ ಎಕ್ಸ್‌ಪೀರಿಯನ್ಸ್. ಥ್ಯಾಂಕ್ಸ್ ನಿಮಗೆ ಮತ್ತು ಕಂಪನಿಗೆ' ಅಂತ ಹೇಳಿ ಎದ್ದು ಬರಬೇಕು. ಅವನ ಮುಖ ನೋಡಿದರೆ ಮನಸ್ಸಿನಲ್ಲಿರೋದನ್ನು ಸಲೀಸಾಗಿ ಹೇಳಲು ಸಾಧ್ಯವಾಗಲ್ಲ ಅನ್ನಿಸಿತು.

'ಗುಡ್ ಮಾರ್ನಿಂಗ್ ಸರ್' ಅನ್ನುತ್ತ ಚೇಂಬರ್ ಒಳಕ್ಕೆ ಬಂದಳು.

ಅವನ ಮುಖ ನೋಡಬಾರದು ಅಂತ ನಿರ್ಧರಿಸಿದ್ದರೂ ನೋಡಿಬಿಟ್ಟಳು. ಅರೇ, ಶರತ್‌ಗೆ ಮುಖವೇ ಇಲ್ಲ! ಕಣ್ಣು, ಮೂಗು ಏನೂ ಸರಿಯಾಗಿ ಕಾಣುತ್ತಿಲ್ಲ. ಮಾತೇ ಆಡದೆ ಸುಮ್ಮನೆ ಕೂತಿದ್ದಾನೆ. ಮಾತಾಡಲು ಅವನಿಗೆ ಬಾಯಿಯೇ ಇಲ್ಲ. ಚೇಂಬರ್ ಒಳಕ್ಕೆ ಬಂದಾಗ ಅವನ ಮುಖ ಅಸ್ಪಷ್ಟವಾಗಿ ಕಂಡಿತ್ತಲ್ಲ. ಈಗ ಏನಾಯ್ತು? ಮತ್ತೊಮ್ಮೆ ದಿಟ್ಟಿಸಿ ನೋಡಿದಳು. ಅವನು ಏನೋ ಹೇಳಲು ಪ್ರಯತ್ನಿಸುತ್ತಿದ್ದಾನೆ ಎಂದು ಭಾಸವಾಯಿತು. ಆದರೆ, ಮಾತು ಹೊರಬರುತ್ತಿಲ್ಲ! ನನ್ನ ಕಣ್ಣುಗಳಿಗೆ ಏನಾದರೂ ಆಗಿರಬಹುದೇ ಅನ್ನಿಸಿ ಭಯವಾಯಿತು.

'ಸರ್ ನಂಗೆ ಕೆಲಸ ಸಿಕ್ಕಿದೆ. ಮದುವೆಯೂ ಗೊತ್ತಾಗಿದೆ. ನಾನು ಕೆಲ್ಸ ಬಿಡ್ತಿದ್ದೀನಿ. ರೆಸಿಗ್ನೇಷನ್ ಲೆಟರ್ ವಿಪಿಯವರಿಗೆ ಕೊಟ್ಟಿದ್ದೀನಿ. ಅದರ ಕಾಪಿ ನಿಮಗೆ ಮೇಲ್ ಮಾಡಿದ್ದೀನಿ. ನಾನು ಹೋಗಬೇಕು...' ಅನ್ನುತ್ತ ಚೇಂಬರ್‌ನಿಂದ ಹೊರಕ್ಕೆ ಬಂದಳು.

ಅವನು ಏನೂ ಹೇಳಲಿಲ್ಲವಲ್ಲ. ಏನಾದರೂ ಹೇಳಲು ಅವನಿಗೆ ಮುಖ, ಬಾಯಿ ಇಲ್ಲ. ಶರತ್ ಹಿಂದೆ ಬರುತ್ತಿರಬಹುದೇ ಅನ್ನಿಸಿತು. ಹಿಂದಕ್ಕೆ ತಿರುಗಿ ನೋಡಲು ಭಯವಾಗಿ ಅವಸರದಲ್ಲಿ ರಸ್ತೆಯತ್ತ ಹೆಜ್ಜೆ ಹಾಕಿದಳು.

●